# ಮಕ್ಕಳಿಗಾಗಿ ಬೈಬಲ್

**ಅರ್ಪಿಸುವ**

## ದಾನಿಯೇಲನು ಮತ್ತು ಕನಸಿನ ರಹಸ್ಯ




ಬರಹಗಾರರು: Edward Hughes
ಚಿತ್ರಲೇಖಕರು: Jonathan Hay
ಅಳವಡಿಸುವವರು: Mary-Anne S.
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada



©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.




ರಾಜನಾದ ನೆಬೂಕದ್ನೆಚ್ಚರನಿಗೆ ಕನಸುಬಿತ್ತು. ಆ ಕನಸು ಅವನನ್ನು ಬಹಳ ತೊಂದರೆಗೆ ಗುರಿಮಾಡಿತು. ದಾನಿಯೇಲನು ದೇವರ ಶಕ್ತಿಯಿಂದ ರಾಜನ ಕನಸಿನ ಅರ್ಥವನ್ನು ಹೇಳವುದಕ್ಕೆ ಶಕ್ತನಾದನು.



ದಾನಿಯೇಲನು ಮೊದಲನೆಯದಾಗಿ ಕನಸನ್ನು ಸರಿಯಾದ ರೀತಿಯಲ್ಲಿ ವಿವರಿಸಿದನು. ಓ ರಾಜನೇ ‘ನೀನು ಕಂಡದ್ದು ಅದ್ಭುತ ಪ್ರತಿಮೆ, ಇದು ಭಯಂಕರವಾದ ರೂಪವನ್ನು ಹೊಂದಿದೆ’ ಅಂದನು.



3

“ಆ ಪ್ರತಿಮೆಯ ತಲೆಯು ಅಪರಂಜಿಯಿಂದ ಮಾಡಲ್ಪಟ್ಟಿತ್ತು” ಎಂದು ಹೇಳಿ ದಾನಿಯೇಲನು ಮುಂದುವರಿಸಿದನು.



4

“ಅದರ ಎದೆ ತೋಳುಗಳು ಬೆಳ್ಳಿ” ಯಿಂದ ಮಾಡಲ್ಪಟ್ಟಿವೆ.



5

“ಅದರ ಹೊಟ್ಟೆ ಮತ್ತು ತೋಡೆಗಳು” ತಾಮ್ರದಿಂದ ಮಾಡಲ್ಪಟ್ಟಿವೆ.



6

“ಅದರ ಕಾಲುಗಳು ಕಬ್ಬಿಣದಿಂದ, ಪಾದಗಳು ಅರ್ಧ ಕಬ್ಬಿಣ ಮತ್ತು ಅರ್ಧ ಮಣ್ಣಿನಿಂದ” ಮಾಡಲ್ಪಟ್ಟಿದ್ದವು.



7

ಪ್ರತಿಮೆಯ ಕುರಿತು ರಾಜನಿಗೆ ವಿವರಿಸಿದ ನಂತರ, ದಾನಿಯೇಲನು ಕನಸಿನ ಉಳಿದ ಭಾಗವನ್ನು ಹೇಳಿದನು.



8


“ನೀನು ನೋಡುತ್ತಿರಲಾಗಿ ಒಂದು ಬಂಡೆಯು ಕೈಗಳನ್ನು ಉಪಯೋಗಿಸದೆಯೇ ಒಡೆಯಲ್ಪಟ್ಟಿತು” ಎಂದು ದಾನಿಯೇಲನು ರಾಜನಿಗೆ ಹೇಳಿದನು.
9
“ಆ ಗುಂಡು ಬಂಡೆಯು ಸಿಡಿದು ಬಂದು ಆ ಪ್ರತಿಮೆಯ ಕಬ್ಬಿಣ ಮಣ್ಣಿನ ಹೆಜ್ಜೆಗಳಿಗೆ ಬಡಿದು ಚೂರು ಚೂರು ಮಾಡಿದು.”
10
“ಆಗ ಪ್ರತಿಮೆ ಮಣ್ಣಿನಲ್ಲಿ ಪುಡಿಪುಡಿಯಾಗಿ ಹೊಟ್ಟಿನಂತಾಯಿತು. ದಾನಿಯೇಲನು ತಡೆದನು. ಪ್ರತಿಮೆಗೆ ಬಡಿದ ಆ ಬಂಡೆಯು ಮಹಾಪರ್ವತವಾಗಿ ಲೋಕದಲ್ಲೆಲ್ಲಾ ತುಂಬಿಕೊಂಡಿತು.”
11
ರಾಜನು ವಿಸ್ಮಯಗೊಂಡನು, ತಾನು ಕಂಡ ಕನಸು ಅದು ಸರಿಯಾಗಿಯೇ ಇತ್ತು. ಇದು ದಾನಿಯೇಲನಿಗೆ ಹೇಗೆ ಗೊತ್ತು? ದೇವರು ಮಾತ್ರವೇ ದಾನಿಯೇಲನಿಗೆ ಹೇಳಿದನು. ನಂತರ ದಾನಿಯೇಲನು ರಾಜನಾದ ನೆಬೂಕದ್ನೆಚ್ಚರನು ಕಂಡ ಕನಸಿನ ಅರ್ಥವನ್ನು ಹೇಳಲು ಪ್ರಾರಂಭಿಸಿದನು.
12
“ಪರೋಕದ ದೇವರು ನಿನಗೆ ರಾಜ್ಯ ಬಲಪರಾಕ್ರಮ ವೈಭವಗಳನ್ನು ಕೊಟ್ಟಿದ್ದಾನೆ.
ನೀನೇ ಆ ಬಂಗಾರದ ತಲೆ” ಎಂದು ದಾನಿಯೇಲಸು ರಾಜನಿಗೆ ಹೇಳಿದನು.
13
ದಾನಿಯೇಲನು ರಾಜನಿಗೆ ನಿನ್ನ ಬಂಗಾರದ ರಾಜ್ಯವು ಕೊನೆಯಾಗುತ್ತದೆ. ಪ್ರತಿಮೆಯ ಬೆಳ್ಳಿಯ ಭಾಗವು ಅಂದರೆ ದುರ್ಬಲವಾದ ರಾಜ್ಯವು ಅದರ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತದೆ ತಾಮ್ರ ಅಂದರೆ ಅದು ಬೇರೊಂದು ರಾಜ್ಯದಾಗಿರುತ್ತದೆ. ಮತ್ತು ಕಬ್ಬಿಣ ಮತ್ತು ಮಣ್ಣು ನಾಲ್ಕನೇ ರಾಜ್ಯವಾಗಿ ನಿಲ್ಲುತ್ತದೆ.
ರಾಜ್ಯ 1
ರಾಜ್ಯ 2
ರಾಜ್ಯ 3
ರಾಜ್ಯ 4
14

ಕೊನೆಯದಾಗಿ ದಾನಿಯೇಲನು ರಾಜನಿಗೆ ಈ ವಿಷಯವನ್ನು ತಿಳಿಸಿದನು. “ಪರಲೋಕ ದೇವರು ಒಂದು ರಾಜ್ಯ ವನ್ನು ಸ್ಥಾಪಿಸುವನು ಅದು ಎಂದಿಗೂ ಅಳಿಯದು”.



15

ದಾನಿಯೇಲನಿಗೆ ದೇವರೊಬ್ಬನೇ ಈ ಕನಸಿನ ಅರ್ಥವನ್ನು ತಿಳಿದುಕೊಳ್ಳಲು ಜ್ಞಾನವನ್ನು ದಯಪಾಲಿಸಿದ್ದಾನೆಂಬುದಾಗಿ ರಾಜನು ತಿಳಿದುಕೊಂಡನು. ನೆಬೂಕದ್ನೆಚ್ಚರನು ಅವನಿಗೆ ಅಮೂಲ್ಯವಾದ ಬಹುಮಾನಗಳನ್ನು ಕೊಟ್ಟು ರಾಜ್ಯದಲ್ಲಿ ಮುಖ್ಯಸ್ಥನನ್ನಾಗಿ ನೇಮಿಸಿದನು.



16



1, 2, 3 ನೇ ರಾಜ್ಯಗಳು ಬಂದು ಹೋಗುತ್ತದೆ. ೪ನೇ ರಾಜ್ಯದ ನಂತರ ದೇವರ ರಾಜ್ಯವು ಬರುತ್ತದೆ ಮೆಸ್ಸೀಯನು ಲೋಕವನ್ನು ಆಳುತ್ತಾನೆ. ಅದು ಬೇಗನೇ ಆಗಬಹುದು.

17

ದಾನಿಯೇಲನು ಮತ್ತು ಕನಸಿನ ರಹಸ್ಯ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ದಾನಿಯೇಲ **2**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

18

# ಮುಕ್ತಾಯ

32 60

19

**ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.**

**ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.**

**ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:**
**ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.**

**ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!**
**ಯೋಹಾನ 3:16**

20